ಸಾಕ್ಷಿಯನ್ನು ಪುನಃ ದಿ.**15.12.2025** ರಂದು ಕರೆಯಿಸಿ**,** ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು**.**

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ಆ ದಿನ ಸೈಯದ್ ಇಲಿಯಾಜ್ ರವರನ್ನು ಅಂಗಶೋಧನೆ ಮಾಡುವಾಗ ನಗದು ಹಣ ರೂ.600 ರೂ ಸಿಕ್ಕಿತು. ಶಹಬಾಜ್ ಖಾನ್ ರವರನ್ನು ಅಂಗಶೋಧನೆ ಮಾಡುವಾಗ ನಗದು ಹಣ ರೂ.700 ಸಿಕ್ಕಿತು. ಸೈಯದ್ ವಸೀಂ ನ ತಪಾಸಣೆ ಮಾಡಿದಾಗ ಕೈಯಲ್ಲಿ ಒಂದು ಪ್ಲಾಸ್ಟಿಕ್ ಕವರ್ ಇತ್ತು. ಅದನ್ನು ತಪಾಸಣೆ ಮಾಡಿದಾಗ ಆ ಪ್ಲಾಸ್ಟಿಕ್ ಕವರ್ ನಲ್ಲಿ ಸೊಪ್ಪು ಇತ್ತು. ಆ ಸೊಪ್ಪು ಗಾಂಜಾ ಸೊಪ್ಪು ಎಂದು ಅನಿಸಿತ್ತು. ಆ ಗಾಂಜಾ ಸೊಪ್ಪನ್ನು ತೂಕ ಮಾಡಲಾಯಿತು. ಅದನ್ನು ತೂಕ ಮಾಡಲು ಒಂದು ತೂಕದ ಯಂತ್ರವನ್ನು ತಂದಿದ್ದರು. ಆ ಗಾಂಜಾ ಸೊಪ್ಪನ್ನು ತೂಕ ಮಾಡಲಾಗಿ ಅದರ ತೂಕ 250 ಗ್ರಾಂ ಇತ್ತು. ಅದರಿಂದ ಮಾದರಿಗಾಗಿ 100 ಗ್ರಾಂ ಅಷ್ಟು ಗಾಂಜಾವನ್ನು ಪ್ರತ್ಯೇಕವಾಗಿ ಒಂದು ಬಟ್ಟೆ ಚೀಲದಲ್ಲಿ, ಬಾಯನ್ನು ಕಟ್ಟಿ, K ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಉಳಿದ ಗಾಂಜಾವನ್ನು ಪ್ರತ್ಯೇಕವಾಗಿ ಬಟ್ಟೆ ಚೀಲದಲ್ಲಿ ಹಾಕಿ ಸೀಲ್ ಮಾಡಲಾಯಿತು. ಸ್ಥಳದಲ್ಲಿ ಇದ್ದ ಕೀರ್ತಿಪ್ರಸಾದ್ ಪೊಲೀಸರು ಫೋಟೋವನ್ನು ತೆಗೆದರು. ಆ ಸಮಯದಲ್ಲಿ ಪೊಲೀಸರು ಮಹಜರ್ ಮಾಡಿದರು. ಆ ಮಹಜರನ್ನು ಈಗಾಗಲೇ ನಿಶಾನೆ ಪಿ5 ಎಂದು ಗುರುತಿಸಲಾಗಿದೆ. ಆ ಮಹಜರಿನಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ5(ಬಿ) ಎಂದು ಗುರುತಿಸಲಾಯಿತು. ಆ ದಿನ ಸಿಕ್ಕಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಆರೋಪಿಗಳಾಗಿ ಇದ್ದಾರೆ. ಸ್ಯಾಂಪಲ್ ಗಾಂಜಾವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ನಗದು ರೂ.600 ಮತ್ತು ನಗದು ರೂ.700 ಹಣವನ್ನು ಈಗಾಗಲೇ ಮು ಮಾ 2 ಮತ್ತು 3 ಎಂದು ಗುರುತಿಸಲಾಗಿದೆ.
2. ದಿನಾಂಕ 01.07.2021 ರಂದು ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಹೆಬ್ಬೂರು ಪೊಲೀಸರು ನನ್ನನ್ನು ಠಾಣೆಗೆ ಕರೆದರು. ನಾನು ಬೆಳಗ್ಗೆ 9.30 ಗಂಟೆಗೆ ಪೊಲೀಸ್ ಠಾಣೆಗೆ ಹೋದೆನು. ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ ದೇವಿಕಾ ಮೇಡಂ, ಇನ್ನೊಬ್ಬರು ಪೊಲೀಸ್ ಮತ್ತು ಸೈಯದ್ ವಸೀಂ, ಪವನ್ ಯಾದವ್ ಇದ್ದರು. ನಮ್ಮನ್ನು ಪೊಲೀಸರು ಆರೋಪಿತರ ಜೊತೆಗೆ ನಜರಾಬಾದ್ ಗೆ ಕರೆದುಕೊಂಡು

ಹೋದರು. ಆರೋಪಿತರು ಗಾಂಜಾವನ್ನು ತೋರಿಸುತ್ತೇವೆ ಎಂದು ಹೇಳಿ ಕರೆದುಕೊಂಡು ಹೋದರು. ಅದು ಆರೋಪಿ ಸೈಯದ್ ಖದೀರ್ ರವರ ಮನೆಯಾಗಿತ್ತು. ಆ ಮನೆಗೆ ಹೋದಾಗ ಸೈಯದ್ ಖದೀರ್ ರ ಹೆಂಡತಿ ಮನೆಯ ಹೊರಗೆ ಬಂದರು. ಆಕೆಯ ಹತ್ತಿರ ಸೈಯದ್ ಖದೀರ್ ರ ಬಗ್ಗೆ ವಿಚಾರ ಮಾಡಿದಾಗ ಮನೆಯ ಒಳಗೆ ಇದ್ದಾರೆ ಎಂದು ಹೇಳಿದರು. ಸೈಯದ್ ಖದೀರ್ ಎಲ್ಲಿ ಹೋಗಿದ್ದಾರೆ ಎಂದು ಹೇಳಿದರು ಎಂದು ನೆನಪಿಲ್ಲ. ಮನೆಯ ಒಳಗೆ ಕತ್ತಲೆ ಕೋಣೆಯ ಒಳಗೆ ಒಂದು ಚೀಲ ಇತ್ತು. ಮನೆಯ ಇನ್ನೊಂದು ಭಾಗದಲ್ಲಿ ಇನ್ನೊಂದು ಚೀಲ ಇತ್ತು. ಮೊದಲ ಚೀಲದಲ್ಲಿ ಗಾಂಜಾ ಸೊಪ್ಪುಗಳು ಇದ್ದವು. ಅದರ ತೂಕ ಮಾಡಿದಾಗ 5 ಕೆಜಿ 934 ಗ್ರಾಂ ಇತ್ತು. ಅದರಿಂದ 100 ಗ್ರಾಂ ಸ್ಯಾಂಪಲ್ ತೆಗೆದರು. ಅದನ್ನು ಪ್ರತ್ಯೇಕವಾಗಿ ಬಿಳಿ ಚೀಲದಲ್ಲಿ ಹಾಕಿ, ಬಾಯನ್ನು ಕಟ್ಟಿ, K ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಇನ್ನೊಂದು ಚೀಲದಲ್ಲಿ 1 ಕೆಜಿ 68 ಗ್ರಾಂ ಇತ್ತು. ಅದರಿಂದ ಸ್ಯಾಂಪಲ್ ಗೋಸ್ಕರ 25 ಗ್ರಾಂನ್ನು ತೆಗೆದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ, ಬಾಯನ್ನು ಕಟ್ಟಿ, K ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಆ ದಿನ ಮಹಜರ್ ಮಾಡಲಾಯಿತು. ಆ ಮಹಜರ್ ನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ6 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ6(ಎ) ಎಂದು ಗುರುತಿಸಲಾಯಿತು. ನನಗೆ ಮಹಜರ್ ಮಾಡುವ ಮೊದಲು ನೋಟೀಸ್ ಕೊಟ್ಟಿದ್ದರು. ಆ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ7(ಎ) ಎಂದು ಗುರುತಿಸಲಾಯಿತು. ಫೋಟೋ ಮತ್ತು ವಿಡಿಯೋ ಇರುವ ಸಿಡಿಯನ್ನು ಸಿಡಿ ಪ್ಲೇಯರ್ ಗೆ ಹಾಕಿ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಯಿತು. ಆ ವಿಡಿಯೋದಲ್ಲಿರುವ ಆರೋಪಿತರಾದ ವಸೀಂ ಮತ್ತು ಪವನ್ ಯಾದವ್ ಸೈಯದ್ ಖದೀರ್ ಮನೆಯಲ್ಲಿ ಗಾಂಜಾದ ಚೀಲಗಳನ್ನು ತೆಗೆದು ತೋರಿಸಿರುತ್ತಾರೆ. ಸಾಕ್ಷಿ ಒಪ್ಪಿದರಿಂದ ಸಿಡಿಯನ್ನು ನಿಶಾನೆ ಪಿ8 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟ ಫೋಟೋವನ್ನು ನಿಶಾನೆ ಪಿ9 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಸೀಲ್ ಪ್ಯಾಕೇಟ್ ಗಳನ್ನು ತೆರೆದು, ಅದರ ಒಳಗಿರುವ ಮುದ್ದೇಮಾಲುಗಳನ್ನು ತೋರಿಸಲಾಗಿ, ಸಾಕ್ಷಿ ಒಪ್ಪಿದ್ದರಿಂದ 100 ಗ್ರಾಂ ನ ಗಾಂಜಾ ಪ್ಯಾಕೇಟನ್ನು ಮು ಮಾ 4 ಎಂದು, 25

ಗ್ರಾಂ ನ ಗಾಂಜಾ ಪ್ಯಾಕೇಟನ್ನು ಮು ಮಾ 5 ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ವಸೀಂ ಮತ್ತು ಪವನ್ ಯಾದವ್, ಪವನ್ ಯಾದವ್ ರವರ ಮನೆಗೆ ಗಾಂಜಾ ಶೇಖರಣೆ ಮಾಡಿಟ್ಟಿದ್ದ ಗೋಡೆಕೆರೆ, ಗೊಲ್ಲರಹಟ್ಟಿ, ಸೊಂಡೇನಹಳ್ಳಿ ಗ್ರಾಮದ ಸ.ನಂ.57/2 ರ ಜಮೀನಿನಲ್ಲಿರುವ ತೋಟದ ಮನೆಗೆ ಕರೆದುಕೊಂಡು ಹೋದರು. ಆ ಮನೆಯಲ್ಲಿ ಪವನ್ ಯಾದವ್ ನ ಹೆಂಡತಿ ಲಾವಣ್ಯ ಇದ್ದರು. ಆ ಮನೆಯಲ್ಲಿ ಐದು ಗೋಣಿ ಚೀಲದಲ್ಲಿ ಗಾಂಜಾ ಸೊಪ್ಪು ಇಟ್ಟಿದ್ದು ಕಂಡುಬಂದಿತು. ಎಲ್ಲಾವನ್ನು ಪ್ರತ್ಯೇಕವಾಗಿ ತೂಕ ಮಾಡಿದಾಗ, ಒಟ್ಟು ಸರಿ ಸುಮಾರು 34 ಕೆಜಿ ಇತ್ತು. ಪ್ರತಿ ಚೀಲದಿಂದ ಸ್ಯಾಂಪಲ್ ಗಾಗಿ 100 ಗ್ರಾಂ ಗಾಂಜಾ ಪ್ರತ್ಯೇಕವಾಗಿ ತೆಗೆದು ಅದನ್ನು ಬಿಳಿ ಬಟ್ಟೆ ಚೀಲದಲ್ಲಿ ಇಟ್ಟು, ಬಾಯನ್ನು ಕಟ್ಟಿ, K ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಅನಂತರ ಸ್ಥಳದಲ್ಲಿ ಮಹಜರ್ ಮಾಡಿದರು ಮತ್ತು ಫೋಟೋ ತೆಗೆದರು ಮತ್ತು ವಿಡಿಯೋ ಮಾಡಿದರು. ಆ ಮಹಜರ್ ನ್ನು ಈಗ ನೋಡುತ್ತಿದು, ಅದನ್ನು ನಿಶಾನೆ ಪಿ10 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ10(ಎ) ಎಂದು ಗುರುತಿಸಲಾಯಿತು. ಆ ದಿನ ತೆಗೆದ ಫೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ11 ಎಂದು ಗುರುತಿಸಲಾಯಿತು. ಫೋಟೋ ಮತ್ತು ವಿಡಿಯೋ ಇರುವ ಸಿಡಿಯನ್ನು ಸಿಡಿ ಪ್ಲೇಯರ್ ಗೆ ಹಾಕಿ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಯಿತು. ಈಗ ವಿಡಿಯೋನಲ್ಲಿ ಚೀಲವನ್ನು ತೋರಿಸಿ ಹಾಜರು ಪಡಿಸಿದ್ದು ಆರೋಪಿ ಪವನ್ ಯಾದವ್. ಸಾಕ್ಷಿ ಒಪ್ಪಿದರಿಂದ ಸಿಡಿಯನ್ನು ನಿಶಾನೆ ಪಿ12 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಸೀಲ್ ಪ್ಯಾಕೇಟ್ ಗಳನ್ನು ತೆರೆದು, ಅದರ ಒಳಗಿರುವ ಮುದ್ದೇಮಾಲುಗಳನ್ನು ತೋರಿಸಲಾಗಿ, ಸಾಕ್ಷಿ ಒಪ್ಪಿದ್ದರಿಂದ 100 ಗ್ರಾಂ ನ ಗಾಂಜಾ 5 ಪ್ಯಾಕೇಟ್ ಗಳನ್ನು ಮು ಮಾ 6 ರಿಂದ 10 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು ಶ್ರೀ.ಆರ್.ವಿ.ದೊಡ್ಡಶಾಣಯ್ಯ ವಕೀಲರಿಂದ 1 ನೇ ಆರೋಪಿತನ ಪರವಾಗಿಃ**

4. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೆಬ್ಬೂರು ಪೊಲೀಸ್ ಠಾಣೆಗೆ ಐದಾರು ಬಾರಿ ಹೋಗಿದ್ದೇನೆ. ಪೊಲೀಸ್ ಠಾಣೆಯಲ್ಲಿ ಸುಮಾರು 7-8 ಸಹಿಗಳನ್ನು ತೆಗೆದುಕೊಂಡಿದ್ದಾರೆ. ಮೊದಲಬಾರಿಗೆ ಹೋದಾಗ ಸ್ಥಳ ಮಹಜರ್ ಮಾಡಬೇಕೆಂದು

ಹೇಳಿ 3-4 ಸಹಿ ಗಳನ್ನು ತೆಗೆದುಕೊಂಡರು. ಮರುದಿನ ಪೊಲೀಸ್ ಠಾಣೆಗೆ ಹೋದಾಗ 4 ಸಹಿಗಳನ್ನು ತೆಗೆದುಕೊಂಡರು. ಇನ್ನೊಂದು ಬಾರಿ ಪೊಲೀಸ್ ಠಾಣೆಗೆ ಹೋದಾಗ 4 ಸಹಿಗಳನ್ನು ತೆಗೆದುಕೊಂಡರು. ಪ್ರತಿಬಾರಿ ಹೋದಾಗ 4 ಸಹಿಗಳನ್ನು ತೆಗೆದುಕೊಂಡಿದ್ದಾರೆ. ಸ್ಥಳ ಪರಿಶೀಲನೆಗೆ ಹೋದಾಗ ಮತ್ತು ವಸ್ತುಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ನನ್ನ ಸಹಿಗಳನ್ನು ತೆಗೆದುಕೊಂಡರು. ನನ್ನ ಆಸ್ಪತ್ರೆ ಹೆಬ್ಬೂರು ಪೊಲೀಸ್ ಠಾಣೆಯ ಪಕ್ಕದಲ್ಲಿದೆ. ನನಗೆ ಈ ಪ್ರಕರಣದ ಮಾಹಿತಿಯನ್ನು ಸಂಜೆ 4.00 ಗಂಟೆಗೆ ದೇವಿಕಾ ಮೇಡಂ ತಿಳಿಸಿದರು. ಹುಳ್ಳೇನಹಳ್ಳಿ ಗೇಟ್ ಬಳಿ ಗಾಂಜಾ ವಶಪಡಿಸಿಕೊಂಡಿದ್ದೇವೆ, ಸ್ಥಳ ಮಹಜರ್ ಗೆ ಬರಬೇಕು ಎಂದು ಹೇಳಿದರು. ಆರೋಪಿತರು ಗಾಂಜಾವನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿ ನನಗೆ ನೋಟೀಸ್ ಅನ್ನು ಆಸ್ಪತ್ರೆಯಲ್ಲಿ ಕೊಟ್ಟರು. ನಾನು ಆ ಕೂಡಲೇ ದೂರವಾಣಿ ಮುಖಾಂತರ ಸಹಾಯಕ ನಿರ್ದೇಶಕರಿಗೆ ತಿಳಿಸಿದೆನು. ಅವರು ಅನುಮತಿಯನ್ನು ಕೊಟ್ಟರು. ನನಗೆ ನೋಟೀಸ್ ಕೊಟ್ಟಾಗ ಅಂದಾಜು 4.00 ಗಂಟೆಯಾಗಿತ್ತು. ನಾನು ಸಹಾಯಕ ನಿರ್ದೇಶಕರಿಗೆ ತಿಳಿಸಿದಾಗ ಸಂಜೆ 4.30 ಗಂಟೆಯಾಗಿತ್ತು. ನಾನು 5.00 ಗಂಟೆಗೆ ಪೊಲೀಸ್ ಠಾಣೆಗೆ ಹೋದೆನು. ಸಂಜೆ 5.30 ಗಂಟೆಗೆ ಠಾಣೆಯಲ್ಲಿ ಸೇರಿದೆವು. ಹುಳ್ಳೇನಹಳ್ಳಿ ಗೇಟ್ ಹತ್ತಿರ ಸಂಜೆ 5.45 ಗಂಟೆಗೆ ಹೋದೆವು. ಹುಳ್ಳೇನಹಳ್ಳಿ ಗೇಟ್ ಬಹಳ ಜನ ಸಂದಣಿ ಇರುವ ಜಾಗ ಎಂದರೆ ನಾವು ಹೋದಾಗ ಇರಲಿಲ್ಲ. ಅದು ರಾಷ್ಟ್ರೀಯ ಹೆದ್ದಾರಿಗೆ ಹೊಂದುಕೊಂಡಿದೆ ಎಂದರೆ ನಿಜ. ಅಲ್ಲಿ ವಾಹನ ಸಂಚಾರ ಇತ್ತು ಎಂದರೆ ಸರಿಯಲ್ಲ. ಗಾಂಜಾ ಮಾರಾಟ ಮಾಡುವ ಬಗ್ಗೆ ಮಾಹಿತಿ ಹೇಗೆ ಬಂದಿತು ಎಂದು ನನಗೆ ತಿಳಿಸಿಲ್ಲ.

5. 1 ನೇ ಆರೋಪಿಯ ಬಳಿ ಯಾವುದೇ ಮಾದಕ ವಸ್ತು ಸಿಗಲಿಲ್ಲ. ನಾನು 1 ನೇ ಆರೋಪಿಗೆ ನೋಟೀಸ್ ಕೊಟ್ಟಿದ್ದೇನೆ. ಆ 600 ರೂ ಎಷ್ಟು ಮುಖಬೆಲೆಯದು ಗೊತ್ತಿಲ್ಲ. ಮಹಜರ್ ನಲ್ಲಿ ಬರೆದಿದ್ದಾರೆಯೇ ನನಗೆ ಗೊತ್ತಿಲ್ಲ. 1 ನೇ ಆರೋಪಿ ಜೇಬಿನಿಂದ 600 ರೂ ತೆಗೆದುಕೊಟ್ಟರು. ಅದು ಎಡಜೇಬೋ, ಬಲಜೇಬೋ ನನಗೆ ಗೊತ್ತಿಲ್ಲ. ಮಾದರಿ ಸೀಲನ್ನು ನನ್ನ ಮುಂದೆ ಪ್ರದರ್ಶನ ಮಾಡಿಲ್ಲ. ಸ್ಯಾಂಪಲ್ ಪ್ಯಾಕೇಟ್ ಗಳಿಗೆ ಸೀರಿಯಲ್ ನಂಬರ್ ಕೊಟ್ಟಿದ್ದರು, ಆದರೆ ನನಗೆ ನೆನಪಿಲ್ಲ. ಆ ಸ್ಯಾಂಪಲ್ ಪ್ಯಾಕೇಟ್ ಗಳನ್ನು ಎಫ್.ಎಸ್.ಎಲ್ ಗೆ ಕಳುಹಿಸಲು ತೆಗೆದುಕೊಂಡರು.

ಅದಕ್ಕೆ ಅಂಟಿಸಿದ ಚೀಟಿಗಳಿಗೆ ನಾನು ಸಹಿ ಮಾಡಿದ್ದೇನೆ. ಎಷ್ಟು ಫೋಟೋಗಳನ್ನು ತೆಗೆದರು ನನಗೆ ಗೊತ್ತಿಲ್ಲ. ಮಹಜರ್ ಆದ ಮೇಲೆ ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು, ಅಲ್ಲಿ ಸಹಿ ತೆಗೆದುಕೊಂಡರು. ಮಹಜರ್ ಗೆ ಸ್ಥಳದಲ್ಲಿ ಸಹಿ ಮಾಡಿದೆನು. ಮಹಜರ್ ಎಷ್ಟು ಪುಟಗಳು ಇದ್ದವು ಎಂದು ಗೊತ್ತಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಪ್ರಿಂಟನ್ನು ತೆಗೆದು ಸಹಿ ತೆಗೆದುಕೊಂಡರು. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ಕೊಟ್ಟಿಲ್ಲ. 1 ನೇ ಆರೋಪಿಯನ್ನು ಅಂಗಶೋಧನೆ ಮಾಡಿ, ಆರೋಪಿಯಿಂದ ಹಣವನ್ನು ಅಮಾನತ್ತುಪಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಅಂಗಶೋಧನೆ ಮಾಡಲು ಕೊಟ್ಟ ನೋಟೀಸನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಶಾನೆ ಪಿ5 ರಂತೆ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯಿಂದ ವಶಪಡಿಸಿಕೊಂಡಿದ್ದೆ ಎನ್ನಲಾದ 600 ರೂಪಾಯಿಗೂ 1 ನೇ ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀಮತಿ.ಚಿನ್ಮಯಿ ವಕೀಲರಿಂದ 3 ನೇ ಆರೋಪಿತನ ಪರವಾಗಿ ಃ</u>**

6. ಪೊಲೀಸರು ನನ್ನ ಆಸ್ಪತ್ರೆಗೆ ಜೀಪ್ ನಲ್ಲಿ ಬಂದು ನನ್ನನ್ನು ಹುಳ್ಳೇನಹಳ್ಳಿ ಗೇಟ್ ಗೆ ಕರೆದುಕೊಂಡು ಹೋದರು. ಪೊಲೀಸರ ಜೀಪಿನಲ್ಲಿ ನಾನು, ದೇವಿಕಾ ಮೇಡಂ, ಶ್ರೀನಿವಾಸಮೂರ್ತಿ ಮತ್ತು ಇಬ್ಬರು ಇದ್ದೆವು. ಹುಳ್ಳೇನಹಳ್ಳಿ 5.40 ಗಂಟೆಗೆ ಹೋದೆವು. ಆ ಸಮಯದಲ್ಲಿ ಜನಸಂದಣಿ ಜಾಸ್ತಿ ಇತ್ತು ಎಂದರೆ ಸರಿಯಲ್ಲ. ಅಲ್ಲಿ ಬಸ್ ಸ್ಟಾಪ್ ಇರುವುದರಿಂದ ಜನಸಂದಣಿ ಜಾಸ್ತಿ ಇತ್ತು ಎಂದರೆ ಸರಿಯಲ್ಲ. ವಸೀಂ ಕೈಯಲ್ಲಿ ಒಂದು ಕವರ್ ಇತ್ತು, ಅದರ ಬಣ್ಣ ಈಗ ನೆನಪಿಲ್ಲ. ತೂಕದ ಯಂತ್ರವನ್ನು ಪೊಲೀಸ್ ನವರು ಠಾಣೆಯಿಂದ ತಂದರು. ತೂಕವನ್ನು ಮೌಲ್ಯಮಾಪನ ಮಾಡುವವರು ತೂಕ ಮಾಡಿದರು. ಅವರ ಹೆಸರನ್ನು ಕೇಳಿದೆನು, ಈಗ ನೆನಪಿಲ್ಲ. 3 ನೇ ಆರೋಪಿ ಕೈಯಲ್ಲಿ ಯಾವುದೇ ಗಾಂಜಾ ಪ್ಯಾಕೇಟ್ ಇರಲಿಲ್ಲ ಎಂದರೆ ಸರಿಯಲ್ಲ. ಮಹಜರ್ ಅನ್ನು ಎಲ್ಲಿ ಮಾಡಿದರು ಎಂದರೆ ಹುಳ್ಳೇನಹಳ್ಳಿ ಗೇಟ್ ಹತ್ತಿರ ಮಾಡಿದರು ಎಂದು ಸಾಕ್ಷಿ ಹೇಳುತ್ತಾರೆ. ಆ ಸಮಯದಲ್ಲಿ ಸುಮಾರು 10 ಜನ ಇದ್ದರು.
7. ದಿನಾಂಕ 01.07.2021 ರಂದು ಬೆಳಗ್ಗೆ 9.30 ಗಂಟೆಗೆ ಮನವಿಯನ್ನು

ಕಳುಹಿಸಿದ್ದರು. ಮತ್ತೆ ಮಹಜರ್ ಮಾಡಬೇಕೆಂದು ಹೇಳಿದರು. ಮಹಜರ್ ಮಾಡಬೇಕೆಂದು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ನಂತರ ನಜರಾಬಾದ್ ಗೆ ಕರೆದುಕೊಂಡು ಹೋದರು. ವಸೀಂ ಗೆ ಹೆದರಿಸಿ, ಬೆದರಿಸಿ ವಿಡಿಯೋವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಆಸ್ಪತ್ರೆ ಪೊಲೀಸ್ ಠಾಣೆಯ ಪಕ್ಕದಲ್ಲಿರುವುದರಿಂದ ನನಗೂ ಪೊಲೀಸ್ ರವರಿಗೂ ವಿಶ್ವಾಸ ಇದೆ ಎಂದರೆ ನಾನು ಆ ದಿನ ಆಸ್ಪತ್ರೆಗೆ ಬಂದಿದ್ದಾಗಿ, ಹಿಂದಿನ ವೈದ್ಯರು ವರ್ಗಾವಣೆಯಾಗಿರುವುದಾಗಿ ಸಾಕ್ಷಿ ಹೇಳುತ್ತಾರೆ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗೆ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಹುಳ್ಳೇನಹಳ್ಳಿ ಗೇಟ್ ಬಳಿ ಗಾಂಜಾ ವಶಪಡಿಸಿಕೊಂಡ ಜಾಗದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಮಹಜರ್ ಅನ್ನು 5.45-7.15 ಗಂಟೆಯವರೆಗೆ ಮಾಡಲಾಯಿತು. ಆ ಮಹಜರ್ ಗೆ ನಾನು, ನನ್ನ ಸಹಾಯಕ ಸಹಿ ಮಾಡಿದ್ದೇವೆ. ಸ್ಥಳದಲ್ಲಿ ಎಷ್ಟು ಫೋಟೋಗಳನ್ನು ತೆಗದರು ಗೊತ್ತಿಲ್ಲ. ಆ ದಿನ ಮಹಜರ್ ಮಾಡಿಲ್ಲ, ಫೋಟೋ ತೆಗೆದಿಲ್ಲ, ಪೊಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ನಜರಾಬಾದ್ ನಲ್ಲಿ ಸಿಕ್ಕಿದ ಗಾಂಜಾಗೂ 3 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಗೋಡೆಕೆರೆ ಗೊಲ್ಲರಹಟ್ಟಿಯಲ್ಲಿ ಸಿಕ್ಕಿದ 5 ಚೀಲ ಗಾಂಜಾಗೂ 3 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಬಿ.ಕೆ.ಪ್ರಭುಸ್ವಾಮಿ ವಕೀಲರಿಂದ 2 ನೇ ಆರೋಪಿತನ ಪರವಾಗಿ :**

8. ಶಹಬಾಜ್ ಖಾನ್ ನ ಯಾವ ಜೇಬಿನಲ್ಲಿ 700 ರೂ ಇತ್ತು ಎಂದು ನನಗೆ ನೆನಪಿಲ್ಲ. ಯಾವ ಮುಖಬೆಲೆಯ ಎಷ್ಟು ನೋಟ್ ಇದ್ದವು ನನಗೆ ನೆನಪಿಲ್ಲ. ಆ ಹಣವನ್ನು ಎಲ್ಲಿಂದ ತಂದಿದ್ದು ಎಂದು ನಾನು ವಿಚಾರಣೆ ಮಾಡಿಲ್ಲ. ಆ ದಿನ ಶಹಬಾಜ್ ಖಾನ್ ನ ಅಂಗಶೋಧನೆ ಮಾಡಿಲ್ಲ ಮತ್ತು ಆತನ ಜೇಬಿನಲ್ಲಿ 700 ರೂ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ 700 ರೂ ಹಣ 2 ನೇ ಆರೋಪಿತನಿಗೆ ಸಂಬಂಧಪಟ್ಟಿದ್ದಲ್ಲ ಇಲ್ಲ ಎಂದರೆ ಸರಿಯಲ್ಲ.ಪೊಲೀಸರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಮುರಳೀಕೃಷ್ಣ ವಕೀಲರಿಂದ 4 ನೇ ಆರೋಪಿತನ ಪರವಾಗಿ :**

9. ದಿನಾಂಕ 01.07.2021 ರಂದು ನನಗೆ ಪೊಲೀಸರು ಲಿಖಿತ ನೋಟೀಸನ್ನು

ಕೊಟ್ಟಿದ್ದರು. ಆ ನೋಟೀಸನ್ನು ಬೆಳಗ್ಗೆ 9.30 ಗಂಟೆಗೆ ಕೊಟ್ಟರು. ನನ್ನ ಕರ್ತವ್ಯದ ಅವಧಿ ಬೆಳಗ್ಗೆ 9.00 ಗಂಟೆ. ನಾನು ಆ ದಿವಸ ಕರ್ತವ್ಯಕ್ಕೆ ಹಾಜರಾದ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿಲ್ಲ. ದಿನಾಂಕ 01.07.2021 ರಂದು ಪೊಲೀಸ್ ಠಾಣೆಯಿಂದ ಗೋಡೆಕೆರೆಗೆ 12.30 ಗಂಟೆಗೆ ಹೋದೆವು. ನಾನು ಆ ದಿವಸ ಪೊಲೀಸ್ ವಾಹನದಲ್ಲಿ ಹೋದೆನು. ನಮ್ಮ ಜೀಪಿನಲ್ಲಿ ನಾನು, ಶ್ರೀನಿವಾಸಮೂರ್ತಿ, ಪೊಲೀಸರು ಒಟ್ಟು 5 ಮಂದಿ ಇದ್ದೆವು. ಗೋಡೆಕೆರೆ ಗ್ರಾಮಕ್ಕೆ ಮಧ್ಯಾಹ್ನ 1.30 ಗಂಟೆಗೆ ಹೋದೆವು. ಪವನ್ ಯಾದವ್ ಸರ್ವೇ ನಂಬರನ್ನು ಹೇಳಿದನು. ಆ ಸರ್ವೇ ನಂಬರ್ ಜಾಗ ಯಾರಿಗೆ ಸಂಬಂಧಪಟ್ಟಿದ್ದು ಎಂದು ನನಗೆ ಗೊತ್ತಿಲ್ಲ. ಆ ತೋಟದಲ್ಲಿ ಒಂದೇ ಮನೆ ಇತ್ತು. ಹಾಲೋ ಬ್ರಿಕ್ಸ್ ನಿಂದ ಕಟ್ಟಿದ್ದ ಶೆಡ್ ಆಗಿತ್ತು. ಅದರ ವಿಸ್ತೀರ್ಣ ಗೊತ್ತಿಲ್ಲ. ಆ ದಿನ ಪೊಲೀಸರು ನಿಖರವಾಗಿ ಏನನ್ನು ಬರೆದುಕೊಂಡರು ಎಂದು ಹೇಳಲು ಆಗುವುದಿಲ್ಲ. ಯಾರು ಬರೆದುಕೊಂಡರು ಎಂದು ಹೇಳಲು ಆಗುವುದಿಲ್ಲ. ಎಷ್ಟೊತ್ತಿನಿಂದ ಎಷ್ಟು ಹೊತ್ತು ಬರೆದುಕೊಂಡರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಎಷ್ಟು ಹಾಳೆಗಳು ಬರೆದುಕೊಂಡರು ಎಂದು ಹೇಳಲು ಆಗುವುದಿಲ್ಲ. ಆ ಬರಹಕ್ಕೆ ಎಷ್ಟು ಜನ ಸಹಿ ಮಾಡಿದರು, ಯಾರು ಯಾರು ಸಹಿ ಮಾಡಿದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆ ಶೆಡ್ ಗೆ ಯಾವ ತರಹ ಶೀಟ್ ಹಾಕಿದ್ದರು ಎಂದು ಗೊತ್ತಿಲ್ಲ. ಯಾವ ಕಂಪನಿಯ ಚೀಲಗಳು, ಎಷ್ಟು ಸೈಜ್ ಎಂದು ಗೊತ್ತಿಲ್ಲ. ಒಂದೊಂದು ಚೀಲದಲ್ಲಿ ಎಷ್ಟೇಷ್ಟು ಗಾಂಜಾ ಇತ್ತು ಎಂದು ಹೇಳಲು ಆಗುವುದಿಲ್ಲ. ನನ್ನ ಮುಂದೆ ಗಾಂಜಾವನ್ನು ತೂಕ ಮಾಡಿಲ್ಲ ಎಂದರೆ ಸರಿಯಲ್ಲ. ಮೌಲ್ಯಮಾಪನದವರು ತೂಕ ಮಾಡಿದರು. ಅವರನ್ನು ಯಾರು ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಆ ಒಂದು ಮನೆ ಬಿಟ್ಟರೆ ಬೇರೆ ಮನೆ ಇರಲಿಲ್ಲ. ಮಹಜರ್ ಬರೆದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಮಹಜರ್ ಅನ್ನು ಸ್ಥಳದಲ್ಲಿ ಬರೆದಿಲ್ಲ, ಠಾಣೆಯಲ್ಲಿ ಬರೆದರು ಎಂದರೆ ಸರಿಯಲ್ಲ. ಯಾರನ್ನೂ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಗೂ ಐದು ಚೀಲಕ್ಕೂ ಯಾವ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್ ವಕೀಲರಿಂದ 5 ನೇ ಆರೋಪಿತನ ಪರವಾಗಿ ಃ**

10. ದಿನಾಂಕ 30.06.2021 ರಂದು ನನಗೆ ಪೊಲೀಸರು ನೋಟೀಸ್ ಕೊಟ್ಟರು

ಎಂದರೆ ಸರಿ. ದಿನಾಂಕ 01.07.2021 ರಂದು ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ಬೆಳಗ್ಗೆ 8.50 ಕ್ಕೆ ಬಂದಿದ್ದೆನು. ಆ ದಿನ 5 ಜನ ನಜರಾಬಾದ್ ಗೆ ಹೋಗಿದ್ದೆವು. ನಜರಾಬಾದ್ ನ 4 ನೇ ಕ್ರಾಸ್ ನಲ್ಲಿ ಅಕ್ಕಪಕ್ಕ ಯಾರ ಮನೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಖದೀರ್ ನ ಮನೆಯ ಮುಂದೆ ಮತ್ತು ಹಿಂದೆ ಎಷ್ಟು ಮನೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಸೈಯದ್ ಖದೀರ್ ಮನೆಗೆ ಹೋಗಿದಾಗ ಆತನ ಹೆಂಡತಿ ಮನೆಯ ಬಾಗಿಲು ತೆಗೆದರು, ಅವರ ಹೆಸರು ಗೊತ್ತಿಲ್ಲ. ಆ ಮನೆಯಲ್ಲಿ ಎಷ್ಟು ಜನ ಇದ್ದರು ನನಗೆ ಗೊತ್ತಿಲ್ಲ. ಆ ಮನೆಯನ್ನು ತಪಾಸಣೆ ಮಾಡಲು ನೋಟೀಸ್ ಕೊಟ್ಟಿದ್ದರು. ಆ ನೋಟೀಸನ್ನು ನಾನೇ ಕೊಟ್ಟಿದ್ದೆನು. ಆ ಮನೆಯಲ್ಲಿ ಎಷ್ಟು ರೂಮ್ ಗಳು ಇತ್ತು, ಅಡುಗೆಕೋಣೆ ಎಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಆ ಮನೆಯ ವಿಸ್ತೀರ್ಣ 30X40 ಅಡಿ. ಅದರ ಖಾತಾ ಸಂಖ್ಯೆ ನನಗೆ ಗೊತ್ತಿಲ್ಲ. ಆ ಮನೆ ಯಾರ ಹೆಸರಿನಲ್ಲಿತ್ತು ನನಗೆ ಗೊತ್ತಿಲ್ಲ. ಖದೀರ್ ರವರ ಮನೆ ಬಾಡಿಗೆ ಮನೆಯೋ ಅಥವಾ ಸ್ವಂತ ಮನೆಯೋ ನನಗೆ ಗೊತ್ತಿಲ್ಲ. ನಾವು ಒಳಗಡೆ ಹೋದಾಗ 4 ನೇ ಆರೋಪಿ ಜೊತೆಯಲ್ಲಿದ್ದನು. 4 ಮತ್ತು 5 ನೇ ಆರೋಪಿತರು ನಮ್ಮ ಜೊತೆಯಲ್ಲಿ ಬಂದಿದ್ದರು ಎಂದರೆ ನಿಜ. ಆ ಮನೆಯ ಹಾಲ್ ನಲ್ಲಿ ಗಾಂಜಾ ಸೊಪ್ಪು ಇತ್ತು. ಕತ್ತಲ ಕೋಣೆ ಇತ್ತು, ನಮ್ಮ ಮೊಬೈಲ್ ನಲ್ಲಿ ಟಾರ್ಚ್ ಲೈಟ್ ಇತ್ತು, ಅದನ್ನು ಆನ್ ಮಾಡಿದ್ದೆವು. ಮನೆಯ ಒಳಗಡೆ 5 ಜನ ನಿಂತಿದ್ದೆವು. ಮನೆಯ ಒಳಗೆ ಯಾರು ಗಾಂಜಾ ಸೊಪ್ಪು ತಂದುಕೊಟ್ಟರು ಎಂದು ನೆನಪಿಲ್ಲ. ಡಿಜಿಟಲ್ ತೂಕದ ಯಂತ್ರದ ಕಂಪನಿಯ ಹೆಸರು ಗೊತ್ತಿಲ್ಲ. ಚೀಲಗಳು ಎಷ್ಟು ತೂಕಗಳು ಇತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ತೂಕ ಮಾಡಿದರು ಎಂದು ಸಾಕ್ಷಿ ಹೇಳುತ್ತಾರೆ. ಮನೆಗೆ ಹೋದಾಗ 5 ನೇ ಆರೋಪಿ ಮನೆಯಲ್ಲಿದ್ದನು. ಯಾವುದೋ ಮನೆಯಲ್ಲಿ ಗಾಂಜಾ ಚೀಲಗಳನ್ನು ಇಟ್ಟು, ಆ ಮನೆಯನ್ನು ಖದೀರ್ ನ ಮನೆ ಎಂದು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆ ಗಾಂಜಾ 5 ಕೆಜಿ 934 ಗ್ರಾಂ ತೂಕ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೀಲದ ಮೇಲೆ ಸಹಿ ಮಾಡಿಲ್ಲ. ಮಹಜರ್ ಅನ್ನು ಠಾಣೆಯಲ್ಲಿ ಮಾಡಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಆ ಮನೆಯಲ್ಲಿ ಟೈಪ್ ಮಾಡಿದರು, ಪ್ರಿಂಟ್ ಎಲ್ಲಿ ತೆಗೆದರು ನೆನಪಿಲ್ಲ. ಆ ದಿನ ನಾನು, ದೇವಿಕಾ ಪಿಎಸ್ಐ, ಶ್ರೀನಿವಾಸಮೂರ್ತಿ ಮತ್ತು

ಪುಟ್ಟರಾಜು ಇದ್ದೆವು. ಬೇರೆಯವರು ಇದ್ದರು. ದಿನಾಂಕ **01.07.2021** ರಂದು ನಜರಾಬಾದ್ ಗೆ ಹೋಗಿಲ್ಲ ಎಂದರೆ ಸರಿಯಲ್ಲ. **2** ಗಾಂಜಾ ಚೀಲಗಳು ಇದ್ದಂತಹ ಮನೆ **5** ನೇ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ**/-**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು